
## ನಾಂದಿಪದ

# ಅರಿವು–ವಿಕಾಸದ ಹಂಬಲದಲ್ಲಿ...



ಕಲೆ: ಪುಂಡಲೀಕ ಕಲ್ಲಿಗನೂರು

**ಸಾಹಿತ್ಯದ** ವಿದ್ಯಾರ್ಥಿಗಳ ನಡುವೆ ಆಗಾಗ ಚರ್ಚೆಗೆ ಬರುವ ಸಂಗತಿಗಳಲ್ಲೊಂದು 'ಶ್ರೇಷ್ಠತೆಯ ವ್ಯಸನ'. ಸಾಹಿತ್ಯ ಸೃಷ್ಟಿಗೆ ಸಂಬಂಧಿಸಿದ ಮಹತ್ವಾಕಾಂಕ್ಷೆಯ ಹಂಬಲದ ಕುರಿತ ಈ ಪರಿಕಲ್ಪನೆಯನ್ನು ಕುರಿತ ಬಹುತೇಕ ಚರ್ಚೆಗಳು ಇನ್ನಷ್ಟು ಗೊಂದಲಗಳನ್ನು ಸೃಷ್ಟಿಸುವುದರಲ್ಲಿ ಕೊನೆಗೊಂಡಿರುವುದೇ ಹೆಚ್ಚು. ಶ್ರೇಷ್ಠತೆಯ ವ್ಯಸನದಿಂದ ಸಾಹಿತ್ಯಕ್ಕೆ ಆಗುವ ಅನುಕೂಲ–ಅನನುಕೂಲಗಳ ಬಗ್ಗೆ ವಸ್ತುನಿಷ್ಠ ಚರ್ಚೆಗಳು ನಡೆದಿರುವುದು ವಿರಳ. ಶ್ರೇಷ್ಠತೆಯ ವ್ಯಸನವನ್ನು ವಿವಿಧ ರೂಪಗಳಲ್ಲಿ ಚರ್ಚಿಸಿರುವ ಬರಗೂರು ರಾಮಚಂದ್ರಪ್ಪನವರ 'ಶ್ರೇಷ್ಠತೆಯ ವ್ಯಸನ: ವಿಕಾಸವೋ? ಸೊಕ್ಕೋ?' ಲೇಖನ, ಈ ಸಂಚಿಕೆಯ ವಿಶೇಷಗಳಲ್ಲೊಂದು. 'ಶ್ರೇಷ್ಠತೆಯ ವ್ಯಸನ' ಪರಿಕಲ್ಪನೆಯ ಬಗೆಗಿನ ಪೂರ್ವಗ್ರಹಗಳನ್ನು ನಿವಾರಿಸಲು ಪ್ರಯತ್ನಿಸುವಂತಿರುವ ಹಾಗೂ ಯುವ ಬರಹಗಾರರಲ್ಲಿನ ಗೊಂದಲಗಳನ್ನು ತಿಳಿಗೊಳಿಸುವಂತಿರುವ ಈ ಬರಹ ಇನ್ನಷ್ಟು ಚರ್ಚೆಗೂ ಅವಕಾಶ ಕಲ್ಪಿಸುವಂತಿದೆ.

ಈ ಸಂಚಿಕೆಯ ಇನ್ನೊಂದು ವಿಶೇಷ ಬರಹ, ಕಲಾವಿದ ಎಲ್.ಎನ್. ತಲ್ಲೂರ್ ಅವರ ಸಂದರ್ಶನ. ಕಲಾಜಗತ್ತಿನ ಹೆಮ್ಮೆಯ ವಿಶ್ವಕನ್ನಡಿಗ ತಲ್ಲೂರ್ ಅವರೊಂದಿಗೆ ರಹಮತ್ ತರೀಕೆರೆ ನಡೆಸಿರುವ ಮಾತುಕತೆ, ಕಲಾವಿದನ ವ್ಯಕ್ತಿತ್ವದ ಚೆಲುವು ಹಾಗೂ ವ್ಯಕ್ತಿಗತ ಸಾಧನೆಯ ಪರಿಚಯದೊಂದಿಗೆ, 'ಕಲಾಕೃತಿಗಳನ್ನು ಓದುವ ಬಗೆ'ಗಳ ಕುರಿತು ಸಹೃದಯರಿಗೆ ಪಠ್ಯದಂತೆಯೂ ಇದೆ. ಕನ್ನಡ ಸಾಂಸ್ಕೃತಿಕ ಲೋಕ 'ಗೊಂದಲಪುರ'ವಾಗಿರುವ ಸಂದರ್ಭದಲ್ಲಿ, ತಲ್ಲೂರ್ ಅವರಂಥ ಕಲಾವಿದರು ಕನ್ನಡದ ವಿವೇಕ ಮತ್ತು ವಿನಯದ ಸಮೀಕರಣದ ರೂಪದಲ್ಲಿ ಮುಖ್ಯರೆನ್ನಿಸುತ್ತಾರೆ.

'ಹಳ್ಳ ಬಂತು ಹಳ್ಳ' ಕೃತಿಯ ಮೂಲಕ ಕನ್ನಡ ಕಾದಂಬರಿ ಲೋಕಕ್ಕೆ ಹೊಸನೀರು ಸೇರಿಸಿದ ಶ್ರೀನಿವಾಸ ವೈದ್ಯರು, ಪ್ರಬಂಧ ಪ್ರಕಾರಕ್ಕೂ ಹೊಸ ಚೈತನ್ಯ ನೀಡಿದವರು. ಇತ್ತೀಚೆಗಷ್ಟೇ ನಿಧನರಾದ ಶ್ರೀನಿವಾಸ ವೈದ್ಯರ ಬದುಕು ಹಾಗೂ ಸಾಧನೆಯನ್ನು ಗುರ್ತಿಸುವ ಬರಹವೊಂದು ಈ ಸಂಚಿಕೆಯಲ್ಲಿದೆ. ಬದುಕಿನ ಘನತೆ ಮತ್ತು ಸೌಂದರ್ಯದ ಅಭಿವ್ಯಕ್ತಿಯ ರೂಪದಲ್ಲಿ ವೈದ್ಯರ ಬದುಕು ಮತ್ತು ಕೃತಿಗಳು ನಮಗೆ ಪ್ರೇರಣೆಯಾಗಬೇಕು.

ಸಾವಿನ ಸಮ್ಮುಖದಲ್ಲಿ ಮನುಷ್ಯನ ಸಣ್ಣತನ ಹಾಗೂ ಘನತೆಯನ್ನು ಚಿತ್ರಿಸುವ 'ಸಾವಿನ ಕನ್ನಡಿ' ಅನುಭವ ಕಥನ ಸಹೃದಯರ ಗಮನಸೆಳೆಯುವಂತಿದೆ. ಸಾಹಿತ್ಯ ಸುಗ್ಗಿಯ ಹೊಸ ಫಲಗಳಂತೆ ಮೈದುಂಬಿಕೊಂಡಿರುವ ಕಥೆ, ಕವಿತೆ, ಪ್ರಬಂಧಗಳು ಈ ಸಂಚಿಕೆಯಲ್ಲಿವೆ. ಇವೆಲ್ಲವೂ ವರ್ತಮಾನದ ಸಂದಿಗ್ಧಗಳನ್ನು ಎದುರಿಗಿಡುವುದರ ಜೊತೆಗೆ, ಇಂದು ಮತ್ತು ನಾಳೆಗಳ ಕುರಿತು ಭರವಸೆ ಉಳಿಸಿಕೊಳ್ಳಲು ಅಗತ್ಯವಾದ ಜೀವದ್ರವ್ಯವನ್ನು ಕರುಣಿಸುವಂತಿವೆ.

**ಮಯೂರ ಬಳಗ**

editormy@mayura.co.in